**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 2086/2022**

ಚಾ.ಸಾ–05, ಪ್ರಾ.ಸಾ–5

| | | |
|---|---|---|
| ಹೆಸರು | : | ಪಾಶು ಅಹಮದ್ |
| ತಂದೆಯ ಹೆಸರು | : | ಲೇಟ್ ನಜೀರ್ ಅಹಮದ್ |
| ವಯಸ್ಸು | : | 40 |
| ವೃತ್ತಿ | : | ಪೊಲೀಸ್ ಮುಖ್ಯ ಪೇದೆ, ಮೈಸೂರು ದಕ್ಷಿಣ ಪೊಲೀಸ್ ಠಾಣೆ |
| ವಾಸ | : | ಮೈಸೂರು |

**ದಿನಾಂಕ 01.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

2013 ರಿಂದ 2019 ರವರೆಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15.09.2014 ರಂದು ನಾನು ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿದ್ದಾಗ ರಾತ್ರಿ 8.30 ಗಂಟೆಗೆ ಚಾಸಾ–1 ರವರು ನನ್ನನ್ನು, ಚಾಸಾ–4, 7 ಮತ್ತು 9 ರವರನ್ನು ಕರೆದು ಕಾವೇರಿ ನದಿ ಪಾತ್ರದಲ್ಲಿ ಕಳ್ಳತನದಿಂದ ಅಕ್ರಮವಾಗಿ ಮರಳನ್ನು ಲಾರಿಗಳ ಮೂಲಕ ಸಾಗಿಸಲಾಗುತ್ತಿದೆ ಎಂದು ಹೇಳಿದ್ದು, ನಮ್ಮನ್ನು ಮತ್ತು ಪಂಚರಾದ ಚಾಸಾ–2 ಮತ್ತು 3 ರವರನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ಹೊರಟು ರಾತ್ರಿ 9.00 ಗಂಟೆಗೆ ತುಂಬಲ ಗ್ರಾಮದ ಚಾನೆಲ್ ಬಳಿಯಲ್ಲಿ

ಕಾಯುತ್ತಿದ್ದಾಗ 3 ಲಾರಿಗಳು ಬಂದಿದ್ದು, ಅವುಗಳನ್ನು ತಡೆದು ನಿಲ್ಲಿಸಿದಾಗ ಅವುಗಳ ಚಾಲಕರು ಲಾರಿಗಳನ್ನು ಬಿಟ್ಟು ಓಡಿ ಹೋಗಿರುತ್ತಾರೆ.

ನಂತರ ಸದರಿ 3 ಲಾರಿಗಳನ್ನು ಜಪ್ತಿಪಡಿಸಿ, ರಾತ್ರಿ 9.00 ರಿಂದ 10.00 ಗಂಟೆಯ ಸಮಯದಲ್ಲಿ ಬ್ಯಾಟರಿ ಬೆಳಕು ಮತ್ತು ವಾಹನದ ಹೆಡ್ ಲೈಟ್ ಬೆಳಕಿನ ಸಹಾಯದಿಂದ ಪಂಚನಾಮವನ್ನು ಜರುಗಿಸಿ, ಆ ಲಾರಿಗಳನ್ನು ಠಾಣೆಗೆ ರಾತ್ರಿ 10.30 ಗಂಟೆಗೆ ತರಲಾಯಿತು.

ಚಾಸಅ–1 ರವರು ಘಟನೆಯ ಕುರಿತು ಸ್ವ ವರದಿಯನ್ನು ನೀಡಿದ್ದು, ನಾನು ಹೇಳಿಕೆಯನ್ನು ಪ್ರಾಸಾ–1 ರವರಿಗೆ ನೀಡಿರುತ್ತೇನೆ.

ಸದರಿ ಪಂಚನಾಮದ ದೃಢೀಕೃತ ಪ್ರತಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ.5 ಎಂದು ಗುರುತಿಸಲಾಯಿತು.

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತಿ. ನರಸೀಪುರ**